1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (255)158
2 ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ (ಶಿಡ್ಲಘಟ್ಟ)
3. ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಬಯಲು ಸೀಮೆ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಬವಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕುಡಿಯುವ ನೀರು ಸರಬರಾಜು ಮಾಡುವ ವಿಷಯವು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಆ) ಹಾಗಿದ್ದಲ್ಲಿ, ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಮೇಲಿನ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕುಡಿಯುವ ನೀರಿನ ಬವಣೆ ನೀಗಿಸುವ ಸಂಬಂಧ ನೇತ್ರಾವತಿ ನದಿ ನೀರನ್ನು ಒದಗಿಸಲು ಡಾ:ಪರಮಶಿವಯ್ಯನವರ ವರದಿ ಜಾರಿಗೆ ತರುವ ವಿಚಾರ ಸರ್ಕಾರದ ಗಮನದಲ್ಲಿಯೇ;

ನೇತ್ರಾವತಿ ನದಿಯ ನೀರನ್ನು ನೀರಾವರಿ ಮತ್ತು ಕುಡಿಯುವ ನೀರಿನ ಉದ್ದೇಶದ ಕುರಿತು ಪರಮಶಿವಯ್ಯ ಇವರು ನೀಡಿರುವ ವರದಿಯನ್ನು ಜಾರಿಗೆ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಡಾ: ಪರಮಶಿವಯ್ಯನವರ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಅಂತರಿಕ್ಷ (Satellite) ಸರ್ವೆ ಕಾರ್ಯ ಯಾವ ಹಂತದಲ್ಲಿದೆ;

ಸದರಿ ಯೋಜನೆಯ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ಸೇವಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (262)160
ಸದಸ್ಯರ ಹೆಸರು : ಶ್ರೀ ಪಾಟೀಲ್ ಎ.ಎಸ್(ನದಹಳ್ಳಿ) (ದೇವರ ಹಿಪ್ಪರಗಿ)
ವಿಷಯ : ಬಿಜಾಪುರ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸುವ ಬಗ್ಗೆ.
ಉತ್ತರಿಸುವವರು : (ಶ್ರೀ ಜಿ.ಕರುಣಾಕರರೆಡ್ಡಿ) ಮಾನ್ಯ ಕಂದಾಯ ಸಚಿವರು

1 ಬಿಜಾಪುರ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿದೆಯೇ;

ಇಲ್ಲ

2 ಸದರಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿಲ್ಲದಿದ್ದಲ್ಲಿ, ಕಾರಣವೇನು (ವಿವರ ನೀಡುವುದು);

ಪರಿಶೀಲನೆಯಲ್ಲಿದೆ

3 ಸದರಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ರಾಜ್ಯಮಟ್ಟದ ಹವಾಮಾನ ಕಾವಲು ಸಮಿತಿ ಸಭೆಯಲ್ಲಿ ಪ್ರತಿವಾರ ಮುಂಗಾರು ಮಳೆಯ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಮಳೆ-ಬೆಳೆ ಕೊರತೆ ಮುಂದುವರೆದಲ್ಲಿ ಬರಪೀಡಿತ ವೆಂದು ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರ.ಸಂ. : (167)161
2. ಸದಸ್ಯರ ಹೆಸರು : ಶ್ರೀ ಪ್ರತಾಪಗೌಡ ಪಾಟೀಲ್
3. ಉತ್ತರಿಸುವ ಸಚಿವರು : (ಶ್ರೀ ಗೋವಿಂದ ಎಂ.ಕಾರಜೋಳ್) ಮಾನ್ಯ ಸಣ್ಣ ನೀರಾವರಿ,ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ ಮಾನ್ವಿ ತಾಲ್ಲೂಕಿನ ಯಕ್ಸಾಲಪುರ ಗ್ರಾಮದ ಕೆರೆ ಶಿಥಿಲ ವ್ಯವಸ್ಥೆಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು;

ದಿನಾಂಕ 23/06/07ರಂದು ಆದ ಅತೀ ಮಳೆಯಿಂದ ಈ ಕೆರೆಯ ಏರಿ ಮತ್ತು ಕಾಲುವೆಗಳಿಗೆ ಹಾನಿಯುಂಟಾಗಿದೆ. ಸದರಿ ಕೆರೆಯ ದುರಸ್ತಿಗಾಗಿ ಜಿಲ್ಲಾಧಿಕಾರಿಗಳು, ರಾಯಚೂರು ಇವರು 22.00 ಲಕ್ಷ ರೂ.ಗಳ ಅನುದಾನ ಒದಗಿಸಿದ್ದು, ಇದರಲ್ಲಿ 4.50 ಲಕ್ಷ ರೂ.ಗಳ ಮೊತ್ತದ ರಿಂಗ್ ಬಂಡ್ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಪೂರ್ಣಗೊಳಿಸಲಾಗಿದೆ, 15.60 ಲಕ್ಷ ರೂ.ಗಳ ಮೊತ್ತದ ಇನ್ನಿತರ ದುರಸ್ತಿ ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಿ ಗುತ್ತಿಗೆಯನ್ನು ಜೂನ್ 2008ರಲ್ಲಿ ವಹಿಸಿಕೊಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (168)162
2) ಸದಸ್ಯರ ಹೆಸರು : ಶ್ರೀ.ಪ್ರತಾಪ್ ಗೌಡ ಪಾಟೀಲ್ (ಮಸ್ಕಿ)
3) ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)